

# ಪಾತ್ರಕ್ಕೆ ದೇಹ ಬಾಗಬೇಕು

## ತಾಂಡವ್

ಝೀ ಕನ್ನಡ 'ಜೋಡಿಹಕ್ಕಿ'ಯ ರಾಮ

★ *ನಿಮ್ಮಲ್ಲಿ ನಟ ಹುಟ್ಟಿದ್ದು ಯಾವಾಗ?*

ಬಾಲ್ಯದಲ್ಲಿಯೇ ನನಗೆ ನಟನೇ ಆಗಬೇಕು ಎನ್ನುವ ಕನಸು ಚಿಗುರೊಡೆದಿತ್ತು. ಯಾರ ಬಳಿಯೂ ಹೇಳಿಕೊಂಡಿರಲಿಲ್ಲ. ಪಿಯು ಓದುವಾಗ ಗರಡಿಮನೆಗೆ ಹೋಗುತ್ತಿದ್ದೆ. ಬಿಎ ಹೊತ್ತಿಗೆ ಜಿಮ್‌ಗೆ ಹೊರಟೆ. ಮೈಸೂರಿಗೆ ಎಂಎ ಓದಲು ಹೋದಾಗ ರಂಗಾಯಣದ ಸಂಪರ್ಕ ಬೆಳೆಯಿತು. 'ಮಲೆಗಳಲ್ಲಿ ಮದುಮಗಳು' ನಾಟಕದಲ್ಲಿ ನಟಿಸಿದೆ. ನಿರ್ದೇಶಕ ಬಸವಲಿಂಗಯ್ಯ ನನಗೆ ನಟನಾ ಗುರುಗಳು. ಈಗಲೂ 'ಮದುಮಗಳ' ನೇಪಥ್ಯದಲ್ಲಿ ಕೆಲಸ ಮಾಡುತ್ತೇನೆ.

ರವಿ ಗರಣಿ ಅವರ 'ಕೃಷ್ಣ ರುಕ್ಮಿಣಿ'ಯಲ್ಲಿ ನಟನೆಗೆ ಅವಕಾಶ ಸಿಕ್ಕಿತು. ನಂತರ ಬಿಡುವು ಇಲ್ಲದಂತೆ ಒಂದಾದ ಮೇಲೆ ಒಂದು ಅವಕಾಶಗಳು ಸಿಕ್ಕವು, ತೆಲುಗು, ಮಲೆಯಾಳಂ ಧಾರಾವಾಹಿಗಳಲ್ಲೂ ನಟಿಸಿದ್ದೇನೆ. ಅಷ್ಟರೊಳಗೆ 'ಮರೆಯಲಾರೆ' ಸಿನಿಮಾದಲ್ಲೂ ನಟಿಸಿದೆ. ನನ್ನ ಕನಸು ಇನ್ನೂ ಪರಿಪೂರ್ಣ ಆಗಿಲ್ಲ. ಆ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತಿದ್ದೇನೆ.

★ *ನಿಮ್ಮ ಪಾತ್ರ ಹೇಗಿದೆ? ನಿಮಗೆ ಪಾತ್ರ ಹೇಗಿರಬೇಕು?*

ಇಲ್ಲಿ ರಾಮನ ಪಾತ್ರ ಮಾಡಿದ್ದೇನೆ. ಹಳ್ಳಿಯ ಸೊಗಡಿನ ಪಾತ್ರ. ಗ್ರಾಮೀಣ ಭಾಷೆ. ಪ್ರಮುಖ ಪಾತ್ರ ಕೂಡ ಹೌದು. ನನಗೆ ಯಾವುದೇ ಪಾತ್ರ ಆದರೂ ಅಡ್ಡಿಯಿಲ್ಲ. ಕಥೆಯಲ್ಲಿ ಅದಕ್ಕೆ ಪ್ರಾಮುಖ್ಯತೆ ಇರಬೇಕು. ಮಾದರಿ ಪಾತ್ರವಾಗಿರಬೇಕು. ಅದನ್ನು ಪ್ರತಿನಿಧಿಸಿದರೆ ಪ್ರಾಧಾನ್ಯತೆ ಇದೆ ಅನ್ನಿಸಬೇಕು. ಈ ಹಿಂದೆ ನಟಿಸಿದ ಪಾತ್ರಕ್ಕೂ ಹೊಸ ಪಾತ್ರಕ್ಕೂ ಹೋಲಿಕೆ ಇರಬಾರದು. ನನಗೆ ಕಷ್ಟ ಅನ್ನಿಸುವಂತಹ ಸವಾಲನ್ನು ಪಾತ್ರ ನೀಡಬೇಕು. ನನ್ನೊಳಗಿನ ಕಲಾವಿದನಿಗೆ ಆ ಪಾತ್ರ ಸಮಾಧಾನ ನೀಡುವಂತೆ ಇರಬೇಕು.

★ *ಬಿಡುವಿನ ವೇಳೆಯಲ್ಲಿ ಏನು ಮಾಡುತ್ತೀರಿ?*

ಸಿನಿಮಾ ಆದರೆ ಬಿಡುವು ಸಿಗುತ್ತದೆ. ಧಾರಾವಾಹಿಯಲ್ಲಿ ಪುರುಸೊತ್ತು ಇರಲ್ಲ. ಯಾರಾದರೂ ಫೋನ್ ಮಾಡಿದರೆ ಮಾತನಾಡುವಷ್ಟು ಸಮಯ ಇರಲ್ಲ. ನಿತ್ಯವೂ ಬಣ್ಣ ಹಚ್ಚಲೇಬೇಕು. ಬಣ್ಣ ಹಚ್ಚಿದ ಮೇಲೆ ಅದು ಮೈ ಮರೆಸಿ ಬಿಡುತ್ತದೆ. ಸಮಯ ಹೋಗಿದ್ದೂ ಗೊತ್ತಾಗುವುದಿಲ್ಲ. ಬೇರೆ ಇನ್ನೇನೂ ಯೋಚನೆ ಮಾಡಲೂ ಆಗುವುದಿಲ್ಲ.

★ *ನಟನೊಬ್ಬನಿಗೆ ದೇಹದಾರ್ಢ್ಯತೆ ಬೇಕೆ ಬೇಕಾ?*

ಪಾತ್ರಕ್ಕೆ ದೇಹದಾರ್ಢ್ಯ ಇರಲೇ ಬೇಕು ಎಂದಿಲ್ಲ. ದೇಹ ಎಂತಹ ಪಾತ್ರಗಳನ್ನೂ ಹೊಂದಾಣಿಕೆ ಮಾಡುಕೊಳ್ಳುವಂತೆ ಇರಬೇಕು. ಅಭಿನಯಕ್ಕೆ ದೇಹವೇ ಆಧಾರ ಅದು ಸದೃಢವಾಗಿರಬೇಕು. ದಣಿವು ಅರಿಯದ ರೀತಿ ಅಣಿಗೊಂಡಿರಬೇಕು. ಬೊಜ್ಜು ಇಲ್ಲದಂತೆ ನೋಡಿಕೊಳ್ಳಬೇಕು. ಕ್ರಿಯಾಶೀಲವಾಗಿರಲು ಅನುಕೂಲವಾಗಿರಬೇಕು. ಬಾಗಿ– ಬಳುಕುವುದು ಸುಲಭವಾಗಬೇಕು. ಹಾಗಿರಬೇಕು ಎಂದರೆ ಆರೋಗ್ಯ ಚೆನ್ನಾಗಿ ಕಾಪಾಡಿಕೊಂಡಿರಬೇಕು. ಡಾನ್ಸ್, ಸಮರಕಲೆ, ಜಿಮ್ ಹೀಗೆ ಏನಾದರೂ ಒಂದನ್ನು ರೂಢಿಸಿಕೊಂಡಿರಬೇಕು

★ *ನಟ ಆಗದಿದ್ದರೆ ಏನು ಮಾಡ್ತಾ ಇದ್ರಿ?*

ನಾಟಕ ಮಾಡ್ತಿದ್ದೆ. ರಂಗಭೂಮಿ ನಟನಲ್ಲದಿದ್ದರೂ ಪೊರೆಯುತ್ತದೆ. ಟಿವಿ– ಸಿನಿಮಾದಲ್ಲಿ ಆ ಅವಕಾಶ ಇಲ್ಲದಿರಬಹುದು. ರಂಗಭೂಮಿಗೆ ಎಷ್ಟೇ ಜನರು ಬಂದರೂ ಅವರಿಗೆ ಅವಕಾಶ ಇದ್ದೇ ಇರುತ್ತದೆ. ಆರ್ಥಿಕ ಭದ್ರತೆಗೆ ಒಂದಿಷ್ಟು ತೊಡಕಾಗಬಹುದು. ಈ ಪ್ರಶ್ನೆ ಎಂದೂ ನನಗೆ ಎದುರಾಗಿಲ್ಲ. ಈಗಷ್ಟೇ ಈ ಬಗ್ಗೆ ಯೋಚಿಸಿದಂತೆ ಆಯಿತು.

■ ರಾಘವೇಂದ್ರ